ಸೆಲೆಬ್ರಿಟಿ

■ ಹನಿ

## ಮಾಯಾಗೆ ರಾಹು-ಲ್?

ಉತ್ತರಪ್ರದೇಶದ ಮಾಯಾ ರಾಜ್ಯಕ್ಕೆ ರಾಹುಲ್ ಗಾಂಧಿ 'ರಾಹು'ವಿನಂತೆ ಬಡಿಯಬಹುದೆ... ಎನ್ನುವುದೀಗ ರಾಜಕೀಯ ಕುತೂಹಲಿಗರ ಪ್ರಶ್ನೆ. ಗ್ರೇಟರ್ ನೊಯಿಡಾದ ಭಟ್ಟಾ ಮತ್ತು ಪರ್ಸೌಲ್ ಎಂಬ ಹಳ್ಳಿಗಳಲ್ಲಿ ಹೆದ್ದಾರಿಗಾಗಿ ಭೂಸ್ವಾಧೀನವನ್ನು ವಿರೋಧಿಸುತ್ತಿದ್ದ ರೈತರ ಪರವಾಗಿ ಧರಣಿ ಕುಳಿತು ರಾಹುಲ್ ಗಾಂಧಿ ಭರ್ಜರಿ ಸುದ್ದಿ ಮಾಡಿದ್ದಾರೆ. ಬೈಕ್ ಸವಾರನ ಬೆನ್ನ ಹಿಂದೆ ಕುಳಿತು ಧರಣಿ ಸ್ಥಳಕ್ಕೆ ಬಂದ ರಾಹುಲ್, ಬರೋಬ್ಬರಿ 15 ಗಂಟೆಗಳ ಕಾಲ ಅಲ್ಲಿ ಕುಳಿತದ್ದು ನೋಡಿ ಕಂಗೆಟ್ಟ ಪೊಲೀಸರು, ರಾತ್ರಿ ವೇಳೆ ರಾಹುಲ್‌ರನ್ನು ಬಂಧಿಸಿ ನ್ಯಾಯಾಲಯಕ್ಕೆ ಒಯ್ದಿದ್ದಾರೆ. ಜಾಮೀನಿನ ಮೇಲೆ ಬಿಡುಗಡೆಯಾದ ರಾಹುಲ್, ಕಿರುಕುಳಕ್ಕೆ ಒಳಗಾದ ರೈತರನ್ನು ಕರೆದೊಯ್ದು ಪ್ರಧಾನಮಂತ್ರಿಗೆ ದೂರು ನೀಡಿದ್ದಾರೆ. ಒಟ್ಟಾರೆ ರಾಷ್ಟ್ರೀಯ ಪ್ರಚಾರದ ಬೆಳಕಿನಲ್ಲಿ ರಾಹುಲ್ ಮಿಂಚುತ್ತಿದ್ದಾರೆ.



ಇನ್ನೆರಡು ವರ್ಷಗಳಲ್ಲಿ ಉತ್ತರಪ್ರದೇಶದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯ ಪೂರ್ವಭಾವಿಯಾಗಿ ಈ ರಾಜಕೀಯ ಗದ್ದಲ ನಡೆಯುತ್ತಿದೆ ಎನ್ನುವುದೇ ವೀಕ್ಷಕರ ಅನ್ನಿಸಿಕೆ. ಮೇಲ್ನೋಟಕ್ಕೆ ಇದನ್ನು ರಾಹುಲ್ ಅಲ್ಲಗಳೆದರೂ, ಒಳಗಿಂದೊಳಗೆ ನಡೆಯುತ್ತಿರುವುದು ಅದೇ. ಅಧಿಕಾರ ಕಳೆದುಕೊಂಡು ಹಲವಾರು ವರ್ಷಗಳಿಂದ ಉತ್ತರಪ್ರದೇಶದಲ್ಲಿ ದಿಕ್ಕೆಟ್ಟು ಕುಳಿತಿದ್ದ ಕಾಂಗ್ರೆಸ್ ಕಳೆದ ಲೋಕಸಭಾ ಚುನಾವಣೆಯ ವೇಳೆ 80ರಲ್ಲಿ 21 ಸ್ಥಾನಗಳನ್ನು ಗೆದ್ದಾಗಲೇ ಅಲ್ಲಿನ ರಾಜಕೀಯದ ಬೇರುಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಟಿಸಿಲೊಡೆದಿವೆ. ಮುಲಾಯಂ ಸಿಂಗ್‌ರ ಸಮಾಜವಾದಿ ಪಕ್ಷ ಕೂಡಾ ಇತ್ತೀಚೆಗೆ ಅಲ್ಲಿ ನೆಲಕಚ್ಚಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್‌ಗೆ ಕನಸುಗಳು ಚಿಗುರಲಾರಂಭಿಸಿವೆ. ಹಾಗಾಗಿ ರಾಹುಲ್ ತಂತ್ರಗಾರಿಕೆ ಸರಿಯಾದ ದಿಕ್ಕಿನಲ್ಲೇ ಸಾಗಿದಂತಿದೆ.

ದೆಹಲಿಯಲ್ಲಿ ತುಘಲಕ್ ಬೀದಿಯ 12ನೇ ನಂಬರಿನ ಮನೆಯಲ್ಲಿ ವಾಸವಿರುವ ಅಮೇಥಿಯ ಈ ಎಂಪಿ, 2012ರಲ್ಲಿ ತನ್ನ ರಾಜಕೀಯದ ಪೂರ್ಣ ಖದರನ್ನು ತೋರಿಸಲು ಹೊರಟಂತಿದೆ. ಫ್ಲೋರಿಡಾದ ರೋಲಿನ್ಸ್ ಕಾಲೇಜಿನಲ್ಲಿ ಬಿಎ ಕಲಿತು, ಕೇಂಬ್ರಿಡ್ಜ್‌ನಲ್ಲಿ 'ಅಭಿವೃದ್ಧಿ ಅಧ್ಯಯನ'ದಲ್ಲಿ ಎಂಫಿಲ್ ಮಾಡಿರುವ ರಾಹುಲ್, ಉತ್ತರ ಪ್ರದೇಶದಲ್ಲಿ ಅಭಿವೃದ್ಧಿಯ ಹೆಸರಲ್ಲಿ ರೈತರನ್ನು ಎತ್ತಂಗಡಿ ಮಾಡುತ್ತಿರುವ ಮಾಯಾವತಿಯವರ ರಾಜಕೀಯಕ್ಕೆ ಮಗ್ಗುಲ ಮುಳ್ಳಾಗಿದ್ದಾರೆ. ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಪ್ರಧಾನಿಯ ಹುದ್ದೆಗೆ ರಾಹುಲ್ ನೆಗೆಯುವ ದಿನಗಳನ್ನೇ ಕಾಯುತ್ತಿರುವ 'ಭಟ್ಟಂಗಿ' ಕಾಂಗ್ರೆಸ್ಸಿಗರು ಉತ್ತರ ಪ್ರದೇಶದ ಯುವರಾಜನ ಪೈಲ್ವಾನ್‌ಗಿರಿಗೆ ರೋಮಾಂಚನಗೊಂಡಿದ್ದಾರೆ.



## ಡೊಮಿನಿಕ್ ಸ್ಟ್ರಾಸ್ ಜೈಲಿಗೆ

ಎರಡು ದಿನಗಳ ಹಿಂದೆ ಈತ ದಿನಕ್ಕೆ 3.15 ಲಕ್ಷ ರೂಪಾಯಿ ಬಾಡಿಗೆಯ ಪಂಚತಾರಾ ಹೋಟೆಲಿನಲ್ಲಿ ಉಳಿದುಕೊಂಡಿದ್ದ. ಬಳಿಕ ಮೂರು ದಿನಗಳ ಕಾಲ '11 ಇನ್‌ಟು 13' ಅಡಿಯಷ್ಟೇ ಇರುವ ನ್ಯೂಯಾರ್ಕಿನ ಕುಖ್ಯಾತ ರೈಕರ್ಸ್ ಐಲ್ಯಾಂಡ್ ಜೈಲಿನ ಕೋಣೆ ಸೇರಿದ! ಈತನ ಹೆಸರು ಡೊಮಿನಿಕ್ ಸ್ಟ್ರಾಸ್ ಕಾಹ್ನ್. (ಬರ್ತ್‌ಡೇ 25-4-49). ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್)ಯ ಎಂ.ಡಿ ಆಗಿ, ಕೋಟ್ಯಂತರ ಡಾಲರ್ ಹಣಕಾಸು ವಹಿವಾಟಿನ ಮೇಲ್ವಿಚಾರಣೆ ನೋಡಿಕೊಂಡಿದ್ದ ಡೊಮಿನಿಕ್, ದೊಡ್ಡ ದೊಡ್ಡ ದೇಶಗಳಿಗೇ ಸಾಲ ನೀಡಿದಾತ. ನ್ಯೂಯಾರ್ಕಿನಲ್ಲಿ ತಾನು ಉಳಿದುಕೊಂಡಿದ್ದ ಸೊಫಿಟೆಲ್ ಪಂಚತಾರಾ ಹೋಟೆಲ್ಲಿನ ರೂಮ್ ಕ್ಲೀನರ್ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿರುವ ಆರೋಪದಿಂದ ಹೊರಬರಲು ಡೊಮಿನಿಕ್ ಈಗ ಹರಸಾಹಸ ನಡೆಸಿದ್ದಾರೆ.

ಡಿಎಸ್‌ಕೆ ಎಂದೇ ಜನಪ್ರಿಯರಾಗಿರುವ ಡೊಮಿನಿಕ್ ಫ್ರಾನ್ಸ್‌ನ ಪ್ಯಾರಿಸ್ ಇನ್‌ಸ್ಟಿಟ್ಯೂಟ್ ಆಫ್ ಪೊಲಿಟಿಕಲ್ ಸ್ಟಡೀಸ್‌ನಲ್ಲಿ ಪ್ರೊಫೆಸರ್. 97-99ರಲ್ಲಿ ಫ್ರಾನ್ಸ್‌ನ ಹಣಕಾಸು ಸಚಿವರಾಗಿಯೂ ಕೆಲಸ ಮಾಡಿದವರು. ಸೋಶಲಿಸ್ಟ್ ಪಕ್ಷದ ಸದಸ್ಯ. 2007ರಲ್ಲಿ ಐಎಂಎಫ್ ಮ್ಯಾನೇಜಿಂಗ್ ಡೈರೆಕ್ಟರ್ ಹುದ್ದೆಗೇರಿದಾಗ, ಫ್ರಾನ್ಸ್‌ನ ಅಧ್ಯಕ್ಷ ನಿಕೊಲಾಸ್ ಸರ್ಕೋಜಿಯೇ ಈತನನ್ನು ಬೆಂಬಲಿಸಿದ್ದರು. ಆದರೆ ಈಗ ಅತ್ಯಾಚಾರದ ಆರೋಪದಲ್ಲಿ ಜೈಲು ಪಾಲಾಗಲು ಸರ್ಕೋಜಿಯ ಒಳರಾಜಕೀಯವೇ ಕಾರಣ ಎಂಬ ಗುಲ್ಲೆದ್ದಿದೆ. ಸರ್ಕೋಜಿಯ ಸ್ಥಾನಕ್ಕೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಸೋಶಲಿಸ್ಟ್ ಪಕ್ಷದ ಅಭ್ಯರ್ಥಿಯಾಗಲು ಡಿಎಸ್‌ಕೆ ನಿರ್ಧರಿಸಿದ್ದೇ ಈ ಷಡ್ಯಂತ್ರಕ್ಕೆ ಕಾರಣವಂತೆ. ಸದ್ಯಕ್ಕೆ ಐಎಂಎಫ್ ಹುದ್ದೆಗೆ ರಾಜೀನಾಮೆ ಒಗೆದಾಗಿದೆ.

ಡೊಮಿನಿಕ್ ಪತ್ನಿ ಆ್ಯನಿ ಸಿಂಕ್ಲೇರ್ ಒಂದು ಕಾಲದಲ್ಲಿ ಫ್ರಾನ್ಸಿನ ಜನಪ್ರಿಯ ಟಿವಿ ಪತ್ರಕರ್ತೆ. ಗಂಡನನ್ನು ಜಾಮೀನಿನಲ್ಲಿ ಬಿಡಿಸಿಕೊಳ್ಳಲು ಆಕೆ 10 ಲಕ್ಷ ಡಾಲರ್ ನಗದು ಮತ್ತು 50 ಲಕ್ಷ ಡಾಲರ್‌ನ ಬಾಂಡ್ ನೀಡಿಯಾಗಿದೆ. ಅಮೆರಿಕದ ಕಾನೂನು ಎಷ್ಟು ಕಠಿಣವಾಗಿದೆಯೆಂದರೆ ಜಾಮೀನಿನಲ್ಲಿ ಹೊರಬಂದಿರುವ ಡೊಮಿನಿಕ್ ಸ್ವಂತ ಮನೆಯಲ್ಲೇ ಗೃಹಬಂಧನದಲ್ಲಿರಬೇಕು. ಅಲ್ಲಿ ಪೊಲೀಸ್ ಕಾವಲಲ್ಲದೆ, ಕ್ಯಾಮೆರಾ ಕಣ್ಗಾವಲೂ ಇದೆ. ಸದ್ಯಕ್ಕೆ ನ್ಯೂಯಾರ್ಕಿನ ಪ್ರತಿಷ್ಠಿತ ಪತ್ತೇದಾರಿ ಸಂಸ್ಥೆಯೊಂದು ಡೊಮಿನಿಕ್ ಪರವಾಗಿ ಹೋರಾಡಲು ಒಪ್ಪಂದ ಮಾಡಿಕೊಂಡಿದೆ. 'ನಡೆದದ್ದು ಅತ್ಯಾಚಾರ ಅಲ್ಲ; ಪರಸ್ಪರ ಒಪ್ಪಿಗೆಯಿಂದ ದೇಹ ಹಂಚಿಕೊಂಡದ್ದು' ಎನ್ನುವುದು ಡೊಮಿನಿಕ್ ವಕೀಲರ ವಾದ. ಎಲ್ಲರ ಕಣ್ಣುಗಳೀಗ ಕೋರ್ಟಿನ ಮೇಲಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65